# ಉಪ-ತಹಶೀಲ್ದಾರರು, ನಾಡಕಾರ್ಯಾಲಯ, ತೆಕ್ಕಲಕೋಟೆ.
# ಇವರ ನ್ಯಾಯಾಲಯದಲ್ಲಿ

| ವಾದಿಗಳು: | ವಿರುದ್ಧ: | ಪ್ರತಿವಾದಿಗಳು |
|---|---|---|
| ಎಸ್.ವೀರೇಶಪ್ಪ<br>ತಂದೆ: ದಿ॥ ಈರಣ್ಣ<br>ಕೊಂಚಿಗೇರಿ ಗ್ರಾಮ. | | ಎಸ್.ಮರೇಗೌಡ<br>ತಂದೆ: ಎಸ್.ಈರಣ್ಣ<br>ಕೊಂಚಿಗೇರಿ ಗ್ರಾಮ. |

** ** **

| ಕ್ರ.ಸಂ. | ತಾಲೂಕು | ಹೋಬಳಿ | ಗ್ರಾಮ | ಸರ್ವೆ ನಂಬರು | ವಿಸ್ತೀರ್ಣ: | ತರಂ |
|---|---|---|---|---|---|---|
| 01 | ಸಿರುಗುಪ್ಪ | ತೆಕ್ಕಲಕೋಟೆ | ಕೊಂಚಿಗೇರಿ | 88/C | 2-19 | - |
| 02 | ಸಿರುಗುಪ್ಪ | ತೆಕ್ಕಲಕೋಟೆ | ಕೊಂಚಿಗೇರಿ | 89/B | 7-81 | - |

**ಪೀಠಿಕೆ** :-

ಸಿರುಗುಪ್ಪ ತಾಲೂಕು, ತೆಕ್ಕಲಕೋಟೆ ಹೋಬಳಿ, ಕೊಂಚಿಗೇರಿ ಗ್ರಾಮದ ಮೇಲ್ಕಾಣಿಸಿದ ಜಮೀನಿನ ಹಕ್ಕು ಬದಲಾವಣೆಗೆ ಸಂಬಂಧಿಸಿದಂತೆ ಉಪನೊಂದಣಾಧಿಕಾರಿಗಳು, ಸಿರುಗುಪ್ಪದಲ್ಲಿ ಡಾಕುಮೆಂಟ್ ನಂಬರ 5576/2015-16 ದಿನಾಂಕ: 19-11-2015ರ ಪ್ರಕಾರ ನೊಂದಾವಣೆ ದಸ್ತಾವೇಜು ತಾಲೂಕು ಕಛೇರಿ ಭೂಮಿ ಕೇಂದ್ರದಲ್ಲಿ ಸ್ವೀಕೃತಗೊಂಡು ದಿನಾಂಕ 23-11-2015ರಂದು ನಮೂನೆ- 21 ನೋಟೀಸ್ ತಯಾರಿಸಿ ಹಕ್ಕು ಬದಲಾವಣೆ ಪ್ರಕ್ರಿಯೆ ಜರುಗಿಸಲು ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರಿಗೆ ಕಳುಹಿಸಿ ಕೊಡಲಾಗಿ ಗ್ರಾಮದಲ್ಲಿ ನಮೂನೆ-21 ನೋಟಿಸು ಜಾರಿ ಮಾಡಿರುವ ಸಮಯದಲ್ಲಿ ಅಸಕ್ತಿ ವುಳ್ಳವರಿಂದ ನಿಗದಿತ ಅವಧಿಯೊಳಗಾಗಿ ತಕರಾರು ಅರ್ಜಿ ಸ್ವೀಕೃತವಾಗಿರುವುದರಿಂದ ಇದೊಂದು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ಕಡತ ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದ ವಿವಾದಾಸ್ಪದ ಪ್ರಕರಣದ ವಹಿಯಲ್ಲಿ ನಮೂದಿಸಿ ಕೊಂಡು ಕರ್ನಾಟಕ ಭೂ ಕಂದಾಯ ಕಾಯ್ದೆ ನಿಯಮಗಳು 1966 ನಿಯಮ 43 ಮತ್ತು 67ರಂತೆ ವಿಚಾರಣೆ ದಿನಾಂಕ ನಿಗದಿಪಡಿಸಿ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸ್ ನೀಡಿ ವಿಚಾರಣೆ ಮಾಡಿ ವಿಚಾರಣೆಯನ್ನು ಮುಕ್ತಾಯ ಗೊಳಿಸಲಾಯಿತು.

ವಿವಾದಾಸ್ಪದ ಪ್ರಕರಣದ ವಿಚಾರಣೆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ, ವಿಚಾರಣೆ ಸಮಯದಲ್ಲಿ ವಾದಿಗಳು ಪ್ರತಿವಾದಿಗಳು ನನ್ನ ಸಹೋದರನಾಗಬೇಕಿದ್ದು, ನಮ್ಮ ನಡುವೆ ಸಮಸ್ಯೆ ಇರುವುದರಿಂದ ಸದ್ರಿ ಹಕ್ಕು ಬದಲವಣೆಗೆ ತಕರಾರು ಅರ್ಜಿ ಸಲ್ಲಿಸಿರುತ್ತೇನೆ, ಆದರೆ ನಾವು ಗ್ರಾಮದ ಹಿರಿಯರ ಸಮಕ್ಷಮದಲ್ಲಿ ರಾಜಿಯಾಗಿದು, ನನ್ನ ತಕರಾರನ್ನು ಹಿಂಪಡೆಯುವುದಾಗಿ ರೂಪಾಯಿ 20ರೂ. ಛಾಪಾಕಾಗದದ ಮೇಲೆ ಪ್ರಮಾಣ ಪತ್ರ ಸಲ್ಲಿಸಿ ಹಕ್ಕು ಬದಲಾವಣೆ ಮಾಡಲು ಒಪ್ಪಿಗೆ ನೀಡಿರುತ್ತಾರೆ ಪ್ರತಿವಾದಿಗಳು ನೊಂದಾಯಿತಿ ದಸ್ತಾವೇಜು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಸದರಿ ವಿವಾದಾಸ್ಪದ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲಿಸಲಾಗಿ ಹಾಗೂ ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಲಾಗಿ ದಾಖಲೆಗಳ ಆಧಾರದನ್ವಯ ಸದ್ರಿ ಪ್ರಕರಣವು ನೊಂದಾಯಿತ ದಸ್ತಾವೇಜಾಗಿದ್ದು, ಭಾರತೀಯ ನೊಂದಾವಣೆ ಅಧಿನಿಯಮ ಕಾಯ್ದೆ 1908 ಕಲಂ 17ರ ಪ್ರಕಾರ ಯಾವುದೇ ನೊಂದಾಯಿತ ದಸ್ತಾವೇಜನ್ನು ಗೈರು ಮಂಜೂರು ಮಾಡುವ ತಿರಸ್ಕರಿಸುವ ಅಧಿಕಾರವು ಈ ಕಾರ್ಯಾಲಯದ ವ್ಯಾಪ್ತಿಗೆ ಒಳಪಡುವುದಿಲ್ಲವಾದ್ದರಿಂದ ಹಾಗೂ ವಾದಿ ಮತ್ತು ಪ್ರತಿವಾದಿಗಳು ಗ್ರಾಮದ ಹಿರಿಯರ ಸಮಕ್ಷಮ ರಾಜಿಯಾಗಿ ವಾದಿಗಳು ತಮ್ಮ ತಕರಾರನ್ನು ಹಿಂಪಡೆದಿರುವುದರಿಂದ ಈ ಕೆಳಗಿನಂತೆ.

## ಆ ದೇ ಶ

ಸಂ:ಕಂ:ಹ.ಬ.:ವಿವಾದ: 81 :2015-16 ದಿನಾಂಕ: 30-06-2016

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ಹಾಗೂ ದಾಖಲೆಗಳ ಆದಾರದನ್ವಯ ಸಿರುಗುಪ್ಪ ತಾಲೂಕು ತೆಕ್ಕಲಕೋಟೆ ಹೋಬಳಿ, **ಕೊಂಚಿಗೇರಿ** ಗ್ರಾಮದ ಸರ್ವೆನಂ.**88/C** (ವಿ) 2-19ಎಕರೆ ಮತ್ತು ಸರ್ವೆನಂ.**89/B** (ವಿ) 7-81ಎಕರೆ ಜಮೀನುನಗಳನ್ನು ಡಾಕುಮೆಂಟ್ ನಂಬರ್ 5576/2015-16 ದಿನಾಂಕ: 19-11-2015 ರ ಪ್ರಕಾರ ವಿಕ್ರಯೆದಾರರ ಹೆಸರನ್ನು ಕಡಿಮೆ ಮಾಡಿ ಕ್ರಯದಾರರ ಹೆಸರಿಗೆ ಹಕ್ಕು ಬದಲವಣೆ ಮಾಡಲು ಆದೇಶಿಸಿದೆ.

ಸದರಿ ಆದೇಶವನ್ನು ಬೆರಳಚ್ಚು ಮಾಡಿಸಿ ಓದಿ ತಪ್ಪುಗಳನ್ನು ತಿದ್ದಿ ಸರಿಪಡಿಸಿ ದಿನಾಂಕ: 30/06/16 ಬಹಿರಂಗವಾಗಿ ಆದೇಶಿಸಿದೆ.

ಉಪ ತಹಶೀಲ್ದಾರರು,
ನಾಡಕಾರ್ಯಾಲಯ
ತೆಕ್ಕಲಕೋಟೆ.

ಪ್ರತಿಯನ್ನು:

1) ವಾದಿ ಮತ್ತು ಪ್ರತಿವಾದಿಗಳಿಗೆ,
2) ಭೂಮಿ ಕೇಂದ್ರ, ತಾಲೂಕು ಕಛೇರಿಗೆ.